ಅತಿಯಲ್ವಾ. ನೀನೀಗ ಬಂದಿದ್ದೀ ಅಷ್ಟೇ. ಆಯಿಗೆ ನನ್ನಮೇಲಿರುವ ಪ್ರೀತಿ ನಿಂಗೆ ನಿಧಾನಕ್ಕೆ ಗಮನಕ್ಕೆ ಬರಬಹುದು. ಅಕ್ಕ ಮದ್ವೆ ಆಗಿ ಹೋದ್ಲು, ತಮ್ಮ ಸಂತೋಷ, ದುಬೈಗೆ ಹೋಗಿ ಎಸ್ಕೇಪ್ ಆದ. ನಾನು ಇಲ್ಲಿ ಸಿಕ್ಕಿಬಿದ್ದೆ. ಒಮ್ಮೊಮ್ಮೆ ಈ ತೋಟ, ಮನೆ ಎಲ್ಲವನ್ನೂ ಬಿಟ್ಟು ಓಡಿ ಹೋಗೋಣಾ ಅನಿಸೋದಿದೆ. ಇದೊಂಥರಾ ಸುಳಿ, ಪ್ರೀತಿಯಲ್ಲ. ಹಸಿವಾದ್ರೆ ಮಾತ್ರ ಊಟ ಮಾಡಬೇಕು. ಇಲ್ಲಿ ಆಯಿಗೆ ಬೇಜಾರಾಗುತ್ತೆ ಅಂತ ಊಟ ಮಾಡೋದು. ನಂಗೀಗ ಮೂವತ್ತೇಳು ವರ್ಷ. ಮಗ ದೊಡ್ಡೋನಾಗಿದಾನೆ, ಅವನಿಗೆ ಅವನದ್ದೇ ಆಯ್ಕೆಗಳಿರುತ್ತೆ ಅನ್ನೋದು ಆಯಿಗೆ ಅರ್ಥ ಆಗ್ಲೆ ಇಲ್ಲ. ಲೀವಿಟ್, ಲೆಟ್ಸ್ ಬಿ ಫ್ರಾಂಕ್, ಒಳ್ಳೇ ಸ್ನೇಹಿತರಂತೆ ಇರೋಣಾ' ಬಡಬಡ ಮಾತಾಡುವವನ ಮಾತಿಗೆ ಕೇತಕಿ, 'ಖಂಡಿತ ಸಂದೀಪ, ಅಷ್ಟೊಂದು ಗಾಬರಿ ಬೇಡ. ಅಪ್ಪ ಇಲ್ಲದೇ ಬೆಳೆದೋಳು ನಾನು. ಅಂಥ ವಿಶೇಷ ನಿರೀಕ್ಷೆ ಯಾವತ್ತೂ ಇರಲಿಲ್ಲ. ಅಂದ ಹಾಗೆ ಎಲ್ಲರ ಹಾಗಿರೋದು ಅಂಥ ದೊಡ್ಡ ತಪ್ಪೇನಲ್ಲ. ಹಾಗೆನೇ ನಿಮ್ಮ ಹಾಗೆ ಭಿನ್ನವಾಗಿರೋದು ವಿಶೇಷವಲ್ಲ' ಎಂದವಳ ಮಾತಿನಿಂದ ಸ್ವಲ್ಪ ಸಮಾಧಾನಗೊಂಡವನಂತೆ, 'ಆಯ್ತು ಬಿಡು, ನೀನೂ ಎಲ್ಲರಂತೆ ಸಾಮಾನ್ಯ ಯೋಚನೆಯವಳಲ್ಲ ಅನ್ನೋದೇ ಸಮಾಧಾನ. ಇರಲಿ, ಈಗ ಮಲ್ಕೋ. ಮಂಚದಲ್ಲಿ ನೀನು ಮಲಗ್ತೀಯಾ... ನಾ ಬೇಕಿದ್ರೆ ಕೆಳಗೆ ಮಲಗ್ತೀನಿ' ಎನ್ನುತ್ತಾ ಮೃದುವಾಗಿ, 'ಕೇತಕಿ, ಈ ಫಸ್ಟ್ ನೈಟ್ ಇವೆಲ್ಲ ಸ್ವಲ್ಪ ದಿನ ಮುಂದೂಡುವಾ ಆಗದೇ?' ಎನ್ನುತ್ತಾ ನಕ್ಕ ಸಂದೀಪನ ಮಾತಿನಿಂದ ಕೇತಕಿಗೆ ಇದ್ದ ಸ್ವಲ್ಪ ಆತಂಕ ದೂರವಾಯ್ತು. ತಾನೂ ಇನ್ನೂ ಸಿದ್ಧವಿಲ್ಲವೆನ್ನುವ ಮಾತನ್ನು ಹೇಗೆ ಹೇಳಬೇಕು ಎಂದು ಯೋಚನೆ ಮಾಡುತ್ತಿದ್ದವಳಿಗೆ ಸಮಾಧಾನವಾಗಿ, ಮಂಚದ ಮೇಲೆ ಮುದುಡಿ ಮಲಗಿದಳು.

ಮದುವೆಯ ಓಡಾಟದಿಂದ ಸುಸ್ತಾದುದಕ್ಕೆ ಒಳ್ಳೆಯ ನಿದ್ದೆಯೇ ಬಂದಿತ್ತು. ಬೆಳಗ್ಗೆ ಏಳುತ್ತಿದ್ದಂತೆ ಗಡಿಯಾರ ನೋಡಿದರೆ ಏಳೂವರೆ. ಅಯ್ಯೋ ಅತ್ತೆ ಏನಂದುಕೊಳ್ತಾರೋ ಎಂದು ಬೇಗ ಎದ್ದು ಹೊರಬಂದರೆ ಸಂದೀಪನ ಅಕ್ಕ ನಕ್ಕು, 'ಏನು ಕೇತಕಿ ಇಷ್ಟು ಗಟ್ಟಿ ನಿದ್ದೆ ಮಾಡೋದೇ?' ಎಂದರು. ಕೇತಕಿಯ ಗಾಬರಿ ನೋಡಿ, 'ತಮಾಷೆಗೆ ಹೇಳಿದೆ ಮಾರಾಯ್ತಿ. ನಮ್ಮಲ್ಲಿ ಅಂಥ ಯಾವುದೇ ನಿಯಮವಿಲ್ಲ. ಸೊಸೆನೇ ಬೇಗ ಏಳಬೇಕು, ಕಾಫಿ ಮಾಡ್ಬೇಕು ಎಂದು. ಸಂದೀಪ ಆಗ್ಲೆ ತೋಟದ ಕಡೆಗೆ ಹೋದ ನೋಡು' ಎಂದಾಗ ಕುತೂಹಲವಾಯ್ತು ಕೇತಕಿಗೆ. 'ಛೇ! ನಾನೂ ಹೋಗ್ಬೇಕಿತ್ತು' ಎಂದವಳಿಗೆ, 'ನಾಳೆಯಿಂದ ಹೋಗು. ಒಂದೇ ದಿನದಲ್ಲಿ ಎಲ್ಲ ಮುಗ್ಸಿಬಿಟ್ರೆ...' ಎಂದವರ ಮಾತಿಗೆ, 'ಹ್ಮ...' ಎನ್ನುತ್ತಾ ನಕ್ಕು ಬಚ್ಚಲಿಗೆ ಹೋದಳು.

ಹಲ್ಲುಜ್ಜಿ ಸ್ನಾನ ಮಾಡಿ ಬಂದವಳಿಗೆ ಅಡಿಗೆ ಮನೆಯಿಂದ ಸಂದೀಪನ ದನಿ ಕೇಳಿಸಿತು. ಉಲ್ಲಸಿತವಾಯ್ತು ಮನಸ್ಸು. ಒಳಬಂದವಳನ್ನು ನೋಡಿ ಸಂದೀಪ, 'ಆಯಿ, ಕೇತಕಿಗೂ ಕಾಫಿ ಕೊಡು' ಎನ್ನುತ್ತಾ, 'ಹಾಗೇ ತಿಂಡಿನೂ ತಿಂದುಬಿಡು ಕೇತಕಿ. ನಾನೂ ಸೊಸೈಟಿಗೆ ಹೋಗುವವ್ನು, ನಿನ್ನ ಶಾಲೆಗೆ ಡ್ರಾಪ್ ಮಾಡಿಯೇ ಹೋಗ್ತಿನಿ' ಎಂದ. ಅವನ ಮಾತಿಗೆ ಕೇತಕಿ, 'ಒಂದ್ವಾರ ರಜೆ ಹಾಕಿದೀನಿ...' ಪೂರ್ತಿ ಮಾಡೋ ಮುನ್ನವೇ, 'ಸುಮ್ನೆ ರಜೆ ಯಾಕೆ ವೇಸ್ಟ್ ಮಾಡ್ತೀಯಾ. ಇಲ್ಲಿ ಕಡಿದು ಕಟ್ಟೆ ಹಾಕೋವಂಥದ್ದು ಏನೂ ಇಲ್ಲ. ಅಂಥದ್ದೇನಾದ್ರೂ ಇದ್ರೂ ಅದನ್ನು ಆಯಿ ಕಡಿದು ಕಟ್ಟೆನೂ ಹಾಕಿ ಬಿಡ್ತಾರೆ, ಅಲ್ವಾ ಆಯಿ' ಎಂದ. ಮಗನ ಮಾತಿಗೆ ಆಯಿಯ ಮುಖ ಸಪ್ಪಗಾಯ್ತು. ಆಯಿ ನಗುತ್ತಾ, 'ನಿಂಗೆ ನಾನಂದ್ರೆ ಅಷ್ಟು ಸಸಾರ ಆಗಿದೀನಿ' ಎಂದಾಗ ಸಂದೀಪ, 'ಆಯಿಯ ಮುಖದಲ್ಲಿ ನಗುವೂ ಬರುತ್ತೆ ಅನ್ನೋದನ್ನು ಇವತ್ತೇ ನೋಡಿದ್ದು. ಯಾವಾಗ್ಲೂ ಅಳು, ನನ್ನ ಮಗ, ನಮ್ಮ ವಂಶ ಇಷ್ಟು ಬಿಟ್ರೆ ಬೇರೆ ಮಾತುಗಳೇ ಇರಲಿಲ್ಲ. ಸರಿ, ಈ ಮದ್ವೆಯಿಂದ ಆಯಿ ನಗೋದು ಕಲಿತುಬಿಟ್ಲು' ಎನ್ನುತ್ತಾ ಕೇತಕಿಯತ್ತ ತಿರುಗಿ, 'ನೀನು ಹೊರಡು ಶಾಲೆಗೆ' ಎಂದಾಗ ಕೇತಕಿ ವಿಧಿಯಿಲ್ಲದೇ ಹೊರಟಳು.

ಕೇತಕಿ ಕಾನಿಟ್ಕರ್... ಎಂದು ಎಂದಿನಂತೆ ಕೇತಕಿ, ಹಾಜರಿ ಪುಸ್ತಕಕ್ಕೆ ಸಹಿ ಮಾಡುತ್ತಿದ್ದರೆ ಹಿಂದೆಯೇ